# ವಾರ್ಡ್ ಹಂತದ ಸಮಿತಿ ಸಭೆ

## ವಾರ್ಡ್ ಸಂಖ್ಯೆ: 137

**03-05-2021** ರಂದು ಬೆಳಿಗ್ಗೆ **10.00** ಘಂಟೆಗೆ ವಾರ್ಡ್ ಸಂಖ್ಯೆ: **137** ರಾಯಪುರಂ ವಾರ್ಡ್ ಹಂತದ ಸಮಿತಿ ಸಭೆಯನ್ನು ಶ್ರೀ. ಮೊಹಮದ್ ಜಾವೀದ್. ಸಹಾಯಕ ಕಾರ್ಯಪಾಲಕ ಅಭಿಯಂತರರು(ವಸಂತ ನಗರ ಉಪ ವಿಭಾಗ) ಬಿ.ಬಿ.ಎಂ.ಪಿ ಹಾಗೂ ಅಧ್ಯಕ್ಷರು ಮತ್ತು ವಾರ್ಡ್‌ನ ನೋಡೆಲ್ ಅಧಿಕಾರಿ ವಾರ್ಡ್ ಸಂಖ್ಯೆ **137** ರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಲಾಯಿತು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಚುನಾಯಿತ ಪ್ರತಿನಿಧಿ ಅಧಿಕಾರ ಅವಧಿಯು ದಿನಾಂಕ: **10-09-2020**ಕ್ಕೆ ಮುಕ್ತಾಯವಾಗಿದ್ದು, ಬಿ.ಬಿ.ಎಂ.ಪಿಯ ಪ್ರತಿ ವಾರ್ಡ್‌ಗೆ ನೋಡೆಲ್ ಅಧಿಕಾರಿ ನೇಮಕಾತಿ ಮತ್ತು ವಾರ್ಡ್ ಹಂತದ ಸಮಿತಿ ರಚಿಸಿದ್ದು. ವಾರ್ಡ್‌ಗೆ ಸಂಬಂಧಿಸಿದಂತೆ ಸಾರ್ವಜನಿಕರ ಹಿತರಕ್ಷಣೆ ಗಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಲು ಸಭೆಗೆ ಅಹ್ವಾನಿಸಿದ ಮಾನ್ಯ ಅಧ್ಯಕ್ಷರಿಗೆ ಮತ್ತು ಸಮಿತಿಯ ಸದಸ್ಯರುಗಳಿಗೆ ಸಮಿತಿಯ ಕಾರ್ಯದರ್ಶಿ ಸಭೆಗೆ ಸ್ವಾಗತ ಕೋರುತ್ತಾ ಸಮಿತಿಯ ಅಧ್ಯಕ್ಷರಾದ ಶ್ರೀ.ಮೊಹಮದ್ ಜಾವೀದ್ ರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಮುನ್ನಡೆಸಲಾಯಿತು ಹಾಗೂ ಈ ಹಿಂದಿನ ಸಭೆಯ ನಡಾವಳಿಯ ನಿರ್ಣಯಗಳ ಬಗ್ಗೆ ಕೈಗೊಂಡ ಕಾರ್ಯವನ್ನು ಪರಿಶೀಲಿಸಲಾಯಿತು.

## <u>ಸಭೆಯಲ್ಲಿ ಚರ್ಚಿಸಲಾದ ವಿಷಯಗಳು</u>

ಮೊದಲಿಗೆ ಈ ಹಿಂದಿನ ಸಭೆಯಲ್ಲಿ ಚರ್ಚಿಸಲಾದ ವಿಷಯಗಳ ಬಗ್ಗೆ ಗಮನಹರಿಸುತ್ತಾ ಹಾಗೂ ಸಾರ್ವಜನಿಕರಿಂದ ಬಂದ ದೂರುಗಳನ್ನು ಪರಿಹರಿಸಿದ ಬಗ್ಗೆ ಸಭೆಯಲ್ಲಿ ವಿವರಣೆ ಕೋರಿದರು.

ಅಧ್ಯಕ್ಷರು : ಕೋವಿಡ್-19 ರ ಎರಡನೇ ಅಲೆಯು ತುಂಬ ಬಲಿಷ್ಟವಾಗಿದ್ದು ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ ಹಾಗೂ ಕೊವಿಡ್-19ಕ್ಕೆ ಸಂಬಂಧಿಸಿದಂತೆ ತಮ್ಮ ಅಭಿಪ್ರಾಹ ಮತ್ತು ಸಲಹೆಗಳನ್ನು ನೀಡುವಂತೆ ಸಭೆಯಲ್ಲಿ ತಿಳಿಸಿದರು.

ಮಾನ್ಯ ಸದಸ್ಯರು ವಾರ್ಡ್ ಸಂಖ್ಯೆ 137ರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪೌರ ಕಾರ್ಮಿಕರು ಸ್ವಚ್ಛತೆಗೆ ಸಂಬಂಧಿಸಿದ ಕಾರ್ಯನಿರ್ವಹಿಸುತ್ತಿರುವವರು ಹೆಚ್ಚಿನ ಪ್ರಮಾನದಲ್ಲಿ ವಾಸಿಸುತ್ತಿದ್ದು ಸದರಿ ರವರು ಬೆಂಗಳೂರಿನ ಬೇರೆ ಬೇರೆ ಏರಿಯಾಗಳಿಗೆ ಹೊಗಿ ತಮ್ಮ ಕೆಲಸ ಕಾರ್ಯಗಳನ್ನು ನಿರ್ವಹಿಸಿ ವಾರ್ಡ್‌ಗೆ ಹಿಂತಿರುಗುತ್ತಿರುವುದರಿಂದ ಸದರಿ ಕಾರ್ಮಿಕರಿಗೆ ಮತ್ತು ಕುಟುಂಬ ದವರಿಗೆ ಕರೋನ-19 2ನೇ ಹಂತರ ವೈರಸ್ ಹೆಚ್ಚಿನ ಪ್ರಮಾಣದಲ್ಲಿ ಹರಡುತ್ತಿದ್ದು ಸೂಕ್ತ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ತಿಳಿಸಿದರು

ಅಧ್ಯಕ್ಷರು: ಮಾನ್ಯ ಸದಸ್ಯರು ಆರೋಗ್ಯಧಿಕಾರಿಗಳ ಪ್ರತಿನಿಧಿಯನ್ನು ಸದರಿ ವಿಷಯದ ವಿವರಣೆ ಮತ್ತು ಕೈಗೊಂಡ ಕ್ರಮದ ಬಗ್ಗೆ ಸಭೆಯಲ್ಲಿ ತಿಳಿಸುವಂತೆ ಕೋರಿದರು

ಆರೋಗ್ಯವೈದ್ಯಾಧಿಕಾರಿಗಳ ಪ್ರತಿನಿಧಿಯು ವಾರ್ಡ್ 137ರ ವ್ಯಾಪ್ತಿಯಲ್ಲಿ ಕೋವಿಡ್-19 ಸೊಂಕು ಹರಡದಂತೆ ತಡೆಯಲು ಒಂದು ಆಟೋವನ್ನು ಉಪಯೋಗಿಸಿಕೊಂಡು ವಾರ್ಡ್ ವ್ಯಾಪ್ತಿಯಲ್ಲಿ ಮುಖಗವಸವನ್ನು ಉಪಯೋಗಿಸುವ ಬಗ್ಗೆ, ಅಂತರ ಕಾಪಾಡುವ ಬಗ್ಗೆ, ಮತ್ತು ಕೋವಿಡ್-19 ಯಾವ ರೀತಿಯಲ್ಲಿ ಹರಡುತ್ತದೆ ಮತ್ತು ಸರ್ಕಾರ ನಿಯಮನುಸಾರ ಲಸಿಕೆಯನ್ನು ಪಡೆಯುವಂತೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ ಎಂದು ಸಭೆಯಲ್ಲಿ ತಿಳಿಸಿದರು.

ಆರೋಗ್ಯವೈದ್ಯಾಧಿಕಾರಿಗಳ ಪ್ರತಿನಿಧಿಯು ವಾರ್ಡ್ ಸಂಖ್ಯೆ: 137 ರಲ್ಲಿರುವ ಬಾಬು ಜಗಜೀವನ್ ರಾಮ್ ಅಸ್ಪತ್ತೆಯನ್ನು ಕೋವಿಡ್ ಅಸ್ಪತ್ರೆಯನ್ನಾಗಿ ಪರಿವರ್ತಿಸುತ್ತಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು ಮತ್ತು ಸದರಿ ಅಸ್ಪತ್ತೆಯ ಸದಪಯೋಗವನ್ನು ಪಡೆಯುವಂತೆ ಸಭೆಯಲ್ಲಿ ತಿಳಿಸಿದರು

ಆರೋಗ್ಯವೈದ್ಯಾಧಿಕಾರಿಗಳ ಪ್ರತಿನಿಧಿಯು ವಾರ್ಡ್ ವ್ಯಾಪ್ತಿಯಲ್ಲಿ 45 ವರ್ಷದ ಮೇಲ್ಪಟ್ಟವರಿಗೆ ಲಸಿಕೆ ನೀಡುತ್ತಿದ್ದು ವಾರ್ಡ್‌ನಲ್ಲಿ 45 ವರ್ಷಕ್ಕೆ ಮೇಲ್ಪಟ್ಟವರೆಲ್ಲರು ಲಸಿಕೆಯನ್ನು ಪಡೆಯುವಂತೆ ಸಭೆಯಲ್ಲಿ ತಿಳಿಸಿದರು ಮತ್ತು ಮಾನ್ಯ ಸರ್ಕಾರದ ಆದೇಶದಂತೆ ಮುಂದಿನ ದಿನಗಳಲ್ಲಿ 18 ವರ್ಷಕ್ಕೆ ಮೇಲ್ಪಟ್ಟವರಿಗೆ ಲಸಿಕೆ ಪಡೆಯಲು ಅನ್ ಲೈನ್ ಬುಕಿಂಗ್ ಮುಲಕ ಬುಕ್ ಮಾಡಿಕೊಂಡು ಲಸಿಕೆ ಪಡೆಯುವಂತೆ ಸಭೆಯಲ್ಲಿ ತಿಳಿಸಿದರು.

ವಾರ್ಡ್ ಸದಸ್ಯರು ವಾರ್ಡ್ ವ್ಯಾಪ್ತಿಯಲ್ಲಿ ಕಸ ಸಂಗ್ರಹಣೆ ಮತ್ತು ವಿಲೇವಾರಿಯ ಬಗ್ಗೆ ದೂರುಗಳು ಬರುತ್ತಿದ್ದು ಇದರ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಳ್ಳಲು ಸಭೆಯಲ್ಲಿ ತಿಳಿಸಿದರು.

ಮಾನ್ಯ ಅಧ್ಯಕ್ಷರು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಕೋವಿಡ್-19 2ನೇ ಅಲೆಯು ಹೆಚ್ಚಿರುವುದರಿಂದ ಹಾಗೂ ಜನ ಸಾಮಾನ್ಯರು ಹೆಚ್ಚಾಗಿ ಮನೆಯಲ್ಲಿರುವುದರಿಂದ ಹಾಗೂ ವಾಣಿಜ್ಯ ಕಸವು ಕಡಿಮೆ ಪ್ರಮಾಣದಲ್ಲಿ ಉತ್ಪತ್ತಿಯಾಗುತ್ತಿರುವುದರಿಂದ ಸದರಿ ಸಮಯವನ್ನು ಉಪಯೋಗಿಸಿಕೊಂಡು ಬ್ಲಾಕ್ ಸ್ಪಾಟ್ ತೆರವುಗೊಳಿಸುವುದು ಮತ್ತು ಉತ್ತಮ ರೀತಿಯ

ಅಧ್ಯಕ್ಷರು: ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದ ಬಿ.ಬಿ.ಎಂ.ಪಿ ಪೌರ ಕಾರ್ಮಿಕರು ಮತ್ತು ಗುತ್ತಿಗೆ ಪೌರ ಕಾರ್ಮಿಕರು, ಆಟೋಗಳು ಮತ್ತು ಕಾಂಪ್ಯಾಕ್ಟರ್ ಗಳ ಹಾಜರಾತಿ ಪುಸ್ತಕವನ್ನು ಪರಿಶೀಲಿಸಿದರು ಮುಂದಿನ ದಿನಗಳಲ್ಲಿ ಯಾವುದೇ ದೂರುಬರದಂತೆ ನೋಡಿಕೊಳ್ಳುವಂತೆ ಸಭೆಯಲ್ಲಿ ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳು ವಾರ್ಡ್-137ರ ವ್ಯಾಪ್ತಿಯಲ್ಲಿ ಸ್ವಚ್ಛತೆಯನ್ನು ಕಾಪಾಡಲು ಕ್ರಮ ಕೈಗೊಳ್ಳುವುದಾಗಿ ನಿರ್ಣಯವು ಮಂಡಿಸಿದರು.

ಅಧ್ಯಕ್ಷರು: ಮಳೆಗಾಲವು ಹತ್ತಿರವಿರುವುದರಿಂದ ಮಳೆಯಿಂದ ಹಾನಿಯಾಗುವುದನ್ನು ತಪ್ಪಿಸಲು ಕೈಗೊಂಡ ಕ್ರಮದ ಬಗ್ಗೆ ಸಭೆಯಲ್ಲಿ ವಿವರಣೆ ಕೋರಿದರು.

ಮಾನ್ಯ ಸಂಚಾಲಕರು ಮತ್ತು ಸಹಾಯಕ ಅಭಿಯಂತರರು ಸದರಿ ವಿಷಯದ ಬಗ್ಗೆ ಮಾನ್ಯ ಜಂಟಿ ಆಯುಕ್ತರು ಪ್ರತಿ ಉಪ ವಿಭಾಗಕ್ಕೆ ಒಂದು ಟ್ರಾಕ್ಟರ್ ಮತ್ತು 10 ಜನ ಕಾರ್ಮಿಕರನ್ನು ಮತ್ತು ಬಿಬಿಎಂ.ಪಿ ನೌಕರರನೊಳಗೊಂಡ ತಂಡವನ್ನು ರಚನೆ ಮಾಡಿ ಮಳೆಯಿಂದ ಉಂಟಗುವ ಅವಘಡವನ್ನು ತಡೆಯಲು ಕಂಟ್ರೋಲ್ ರೂಂ ಸ್ಥಾಪನೆ ಮಾಡಲು ಸೂಚಿಸಿದ್ದು, ಅದರಂತೆ ಕಾರ್ಯನಿರ್ವಹಿಸುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು.

ಅಧ್ಯಕ್ಷರು: ಬಿಡಬ್ಲೂಎಸ್‌ಎಸ್‌ಬಿ ಕಛೇರಿಗೆ ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರಿಂದ ಬಂದ ದೂರಿನ ಪುಸ್ತಕವನ್ನು ಪರಿಶೀಲಿಸಿದರು ಹಾಗೂ ಬೇಸಿಗೆ ಕಾಲದಲ್ಲಿ ಸಾರ್ವಜನಿಕರಿಗೆ ಹೆಚ್ಚಿನ ಕುಡಿಯುವ ನೀರಿನ ಅವಶ್ಯಕವಾಗಿರುವುದರಿಂದ ದಿನ ಮತ್ತು ಸಮಯವನ್ನು ನಿಗಧಿ ಮಾಡಿ ಉತ್ತಮವಾಗಿ ನೀರು ಪೂರೈಕೆ ಮಾಡುವಂತೆ ಅಧಿಕಾರಿಗಳಿಗೆ ತಿಳಿಸಿರು.

ವಾರ್ಡ್ ಕಮೀಟಿ ಸದಸ್ಯರು ವಾರ್ಡ್‌ನಲ್ಲಿ ಸ್ಲಂಗಳು ಹೆಚ್ಚಿನ ಪ್ರಮಾಣದಲ್ಲಿರುವುದರಿಂದ ಸಾರ್ವಜನಿಕರಿಗೆ ಕುಡಿಯುವ ನೀರಿನ್ನು ಅಗತ್ಯಕ್ಕೆ ತಕ್ಕಂತೆ ಪೂರೈಕೆ ಮಾಡಲು ಸಭೆಯಲ್ಲಿ ತಿಳಿಸಿದರು.

ಬಿಡಬ್ಲೂಎಸ್‌ಎಸ್‌ಬಿ ಆಧಿಕಾರಿಗಳು ವಾರ್ಡ್ 137 ವ್ಯಾಪ್ತಿಗೆ ಸಂಬಂಧಿಸಿ ಬಂದಂತಹ ದೂರು ಮತ್ತು ತಕ್ಷಣ ಸ್ಥಳಕ್ಕೆ ಬೇಟಿ ನೀಡಿ ಕ್ರಮ ಕೈಗೊಂಡಿರುವ ಬಗ್ಗೆ ಸಭೆಯಲ್ಲಿ ವಿವರಿಸಿದರು ಮತ್ತು ಸಾರ್ವಜನಿಕರಿಗೆ ತೊಂದರೆಯಾಗದಂತೆ ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಮಾಡುವುದಾಗಿ ತಿಳಿಸಿದರು..

ಅಧ್ಯಕ್ಷರು: ಬೆಸ್ಕಂ ಕಛೇರಿಗೆ ವಾರ್ಡ್ 137 ವ್ಯಾಪ್ತಿಗೆ ಸಂಬಂಧಿಸಿ ಬಂದಂತಹ ದೂರು ಮತ್ತು ತಕ್ಷಣ ಸ್ಥಳಕ್ಕೆ ಬೇಟಿ ನೀಡಿ ಕ್ರಮ ಕೈಗೊಂಡಿರುವ ಬಗ್ಗೆ ಸಭೆಯಲ್ಲಿ ವಿವರಿಸಿದರು ಮತ್ತು ಬೇಸಿಗೆ ಕಾಲದಲ್ಲಿ ವಿದ್ಯೂತ್ ಪೂರೈಕೆಯನ್ನು ಮಿತಗೊಳಿಸದಂತೆ ವಿದ್ಯೂತ್ ಸರಬರಾಜು ಮಾಡುವಂತೆ ಸಭೆಯಲ್ಲಿ ತಿಳಿಸಿದರು.

ಬೆಸ್ಕಂ ಆಧಿಕಾರಿಯವರು ವಾರ್ಡ್ 137 ವ್ಯಾಪ್ತಿಗೆ ಸಂಬಂಧಿಸಿ ಬಂದಂತಹ ದೂರು ಮತ್ತು ತಕ್ಷಣ ಸ್ಥಳಕ್ಕೆ ಬೇಟಿ ನೀಡಿ ಕ್ರಮ ಕೈಗೊಂಡಿರುವ ಬಗ್ಗೆ ಸಭೆಯಲ್ಲಿ ವಿವರಿಸಿದರು ಮತ್ತು ಸಾರ್ವಜನಿಕರಿಗೆ ತೊಂದರೆಯಾಗದಂತೆ ಬೇಸಿಗೆ ಕಾಲದಲ್ಲಿ ವಿದ್ಯೂತ್ ಪೂರೈಕೆಯನ್ನು ಸರಬರಾಜು ಮಾಡುವಂತೆ ಸಭೆಯಲ್ಲಿ ಅಧ್ಯಕ್ಷರಿಗೆ ತಿಳಿಸಿದರು.

ಅಧ್ಯಕ್ಷರು: ಕಂದಾಯ ಇಲಾಖೆಯ ಕಂದಾಯ ಪರಿವೀಕ್ಷಕರಿಗೆ ತಮ್ಮ ಪರಿವೀಕ್ಷಣೆಯಲ್ಲಿ ಭೂತ್ ಮಟ್ಟದ ಅಧಿಕಾರಿಗಳಿಂದ ಎರಡನೇ ಹಂತದ ಕರೋನದ ಬಗ್ಗೆ ಜನರಲ್ಲಿ ಜಾಗೃತಿ ನೀಡಲು ಮತ್ತು ಕರೋನ ಕಂಡುಬಂದಲ್ಲಿ ಮೊದಲನೇ ಹಂತ ಮತ್ತು ಎರಡನೇ ಹಂತದ ಸಂಪರ್ಕಿತರನ್ನು ಗುರುತಿಸಲು ಸಭೆಯಲ್ಲಿ ತಿಳಿಸಿದರು.

-5

ಕಂದಾಯ ಅಧಿಕಾರಿಗಳು ಪ್ರತಿ ನಿತ್ಯ ಭೂತ್ ಮಟ್ಟದ ಅಧಿಕಾರಿಗಳು ದಿನ ಕಛೇರಿಗೆ ಹಾಜರಾಗಿ ಸೊಂಕಿನ ಬಗ್ಗೆ ಹರಿವು ಮತ್ತು ಮೊದಲನೆ ಮತ್ತು ಎರಡನೇ ಹಂತದ ಸಂಪರ್ಕಿತರನ್ನು ಗುರ್ತಿಸುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು..

ಅಧ್ಯಕ್ಷರು: ಕಂದಾಯ ಅಧಿಕಾರಿಗಳಿಗೆ ಕೋವಿಡ್-19 ಕಾರ್ಯ ನಿರ್ವಹಿಸುವುದರ ಜೋತೆಗೆ ಕಂದಾಯ ವಸೂಲಾತಿಯನ್ನು ಸಹ ಮಾಡುವಂತೆ ಸಭೆಯಲ್ಲಿ ತಿಳಿಸಿದರು.

ಇಂದಿನ ಸಭೆಯಲ್ಲಿ ಚರ್ಚಿಸಿದ ಹಾಗೂ ನಿರ್ಣಯಗಳನ್ನು ಕಾರ್ಯದರ್ಶಿ ಮತ್ತು ಸಂಚಾಲಕರು. ಸಭೆಯ ನಡಾವಳಿಗಳ ಪುಸ್ತಕದಲ್ಲಿ ದಾಖಲಿಸಿದರು. ವಂದನಾರ್ಪಣೆ ಮಾಡುವುದರ ಮೂಲಕ ಇಂದಿನ ಸಭೆಯನ್ನು ಮುಕ್ತಾಯಗೊಳಿಸಿದರು.

## ಹಾಜರಿದ್ದ ವಾರ್ಡ್ ಕಮೀಟಿ ಸದಸ್ಯರು

| ಕ್ರಮ ಸಂಖ್ಯೆ | ವಾರ್ಡ್ ಹಂತದ ಸಮೀತಿ ಹಾಗೂ ಸದಸ್ಯರುಗಳ ಹೆಸರು ಮೊಬೈಲ್ ಸಂಖ್ಯೆ | | ಸಹಿ |
|---|---|---|---|
| 1 | ಮೊಹಮದ್ ಜಾವೀದ್. ಸಹಾಯಕ ಕಾರ್ಯಪಾಲಕ ಅಭಿಯಂತರರು(ವಸಂತ ನಗರ ಉಪ ವಿಭಾಗ) ಬಿ.ಬಿ.ಎಂ.ಪಿ, ದೂ. ಸಂಖ್ಯೆ: 9845720286 | ಅಧ್ಯಕ್ಷರು ಮತ್ತು ವಾರ್ಡ್‌ನ ನೂಡಲ್ ಅಧಿಕಾರಿ | [signature] |
| 2 | ಶ್ರೀ ಗಿರಿಧರ್ ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ: 137 ಬಿ.ಬಿ.ಎಂ.ಪಿ, ದೂ. ಸಂ 8618436036 | ಸದಸ್ಯ ಕಾರ್ಯದರ್ಶಿ | [signature] |
| 3 | ಗೀತಾ ಹೆಚ್. ದೂ. 9986537126 ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ -137 | ಸದಸ್ಯರು | [signature] |
| 4 | ಸಹಾಯಕ ಕಾರ್ಯಪಾಲಕ ಅಭಿಯಂತರರ (ಕಾಮಗಾರಿ) ಜೆ.ಜೆ.ಆರ್ ನಗರ ಉಪ ವಿಭಾಗದ ರವರ ಪ್ರತಿನಿಧಿ ಶ್ರೀ ಬಾಬು (ಕೆಲಸ ಪರಿವೀಕ್ಷಕರು) ವಾರ್ಡ್-137, ದೂ. 9342582372 | ಸದಸ್ಯರು | |
| 5 | ಆರೋಗ್ಯಾಧಿಕಾರಿಗಳು, ಚಾಮರಜಪೇಟೆ ವಿಭಾಗ ರವರ ಪ್ರತಿನಿಧಿ ಬಸವಲಿಂಗಯ್ಯ ದೂ. 9686418488 | ಸದಸ್ಯರು | [signature] |
| 6 | ಶ್ರೀ ಸಿ. ಆರ್ ರವಿ ಪ್ರಸಾದ್ ವಾರ್ಡ್ ಪ್ರದೇಶದಲ್ಲಿನ ಸ್ಥಳಿಯ ನಾಗರಿಕ ಕಲ್ಯಾಣ ಸಂಘದ ಪ್ರತಿನಿಧಿ. ದೂ. 9845802912 | ಸದಸ್ಯರು | [signature] |
| 7 | ಶ್ರೀ ರಿಜ್ವಾನ್, ವಾರ್ಡ್ ಪ್ರದೇಶದಲ್ಲಿನ ಸ್ಥಳಿಯ ನಾಗರಿಕ ಕಲ್ಯಾಣ ಸಂಘದ ಪ್ರತಿನಿಧಿ. ದೂ. 9845262860 | ಸದಸ್ಯರು | |

| | | | |
|---|---|---|---|
| 8 | ಶ್ರೀ ರಾಜು, ದೂ.. 7676512877<br>ವಾರ್ಡ್ ಪ್ರದೇಶದಲ್ಲಿನ ಸ್ಥಳಿಯ ನಾಗರಿಕ ಕಲ್ಯಾಣ ಸಂಘದ ಪ್ರತಿನಿಧಿ. | ಸದಸ್ಯರು | |
| 9 | ಶ್ರೀಮತಿ ಆಶಾ. ದೂ. 9731317223<br>ಕಂದಾಯ ಪರಿವೀಕ್ಷಕರು | ಸದಸ್ಯರು | |
| 10 | ಸಹಾಯಕ ಕಾರ್ಯಪಾಲಕ ಅಭಿಯಂತರರು (ಘ.ತ್ಯಾ.ನಿ) ರವರ ಪ್ರತಿನಿಧಿ | ಸದಸ್ಯರು | |
| 11 | ಸಹಾಯಕ ಕಾರ್ಯಪಾಲಕ ಅಭಿಯಂತರರ (ಬಿಡಬ್ಲ್ಯೂ.ಎಸ್.ಎಸ್.ಬಿ) ರವರ ಪ್ರತಿನಿಧಿ<br>ಶ್ರೀ ಹನುಮಂತ ರಾಜು. ದೂ. 8618556909 | ಸದಸ್ಯರು | |
| 12 | ಸಹಾಯಕ ಕಾರ್ಯ ಪಾಲಕ ಅಭಿಯಂತರರು (ಬೇಸ್ಕಂ) ರವರ ಪ್ರತಿನಿಧಿ.<br>ದೂ. 9449840364 | ಸದಸ್ಯರು | |

**ಕಾರ್ಯದರ್ಶಿಗಳು**
ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ 137
ವಾರ್ಡ್ ಹಂತದ ಸಮೀತಿ

ಸಹಾಯಕ ಇಂಜನಿಯರ್ (...)
ಕಾ & ಪಾ ಘಟಕ-8,
ಬೆ.ಪಿ.ಕಂ., ಪಶ್ಚಿಮ 3ನೇ ಉಪ-ವಿ...
ಗೋರಿಪಾಳ್ಯ, ಬೆಂಗಳೂರು-560...

**ಅಧ್ಯಕ್ಷರು**
**ಹಾಗೂ ನೋಡಲ್ ಅಧಿಕಾರಿ**
**ವಾರ್ಡ್ ಹಂತದ ಸಮಿತಿ, ವಾರ್ಡ್ ನಂ. 137**

ಪ್ರತಿಯನ್ನು

1. ಜಂಟಿ ಆಯುಕ್ತರು ಪಶ್ಚಿಮ ರಚರ ಅವಗಾಹನೆಗೆ ಸಲ್ಲಿಸಿದೆ,
2. ಮುಖ್ಯ ಅಭಿಯಂತರರು ಪಶ್ಚಿಮ ರವರ ಮಾಹಿತಿಗೆ ಸಲ್ಲಿಸಿದೆ,
3. ಕಛೇರಿ ಕಡತಕ್ಕೆ.